ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**225(247)**
2)	ಮಾನ್ಯ ಸದಸ್ಯರ ಹೆಸರು	ಶ್ರೀ ಮುನಿರಾಜುಗೌಡ ಪಿ.ಎಂ.
3)	ಉತ್ತರಿಸಬೇಕಾದ ದಿನಾಂಕ	14/12/2021
4)	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ	ಪ್ರಶ್ನೆ	ಇಲಾಖಾ ಮಾಹಿತಿ
1	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಎಷ್ಟು ಬಾಯ್ಲರ್ ಸಿಲಿಂಡರ್ ಸ್ಫೋಟ ಪ್ರಕರಣಗಳು ಸಂಭವಿಸಿವೆ; (ಜಿಲ್ಲಾವಾರು ವಿವರ ನೀಡುವುದು)	ಕಳೆದ ಮೂರು ವರ್ಷದಲ್ಲಿ ಬಾಯ್ಲರುಗಳ ಕಾಯ್ದೆ ಅಡಿ ನೋಂದಣಿಯಾಗಿರುವ ಬಾಯ್ಲರುಗಳನ್ನು ಉಪಯೋಗಿಸುತ್ತಿರುವ ಉದ್ದಿಮೆಗಳಲ್ಲಿ ಬಾಯ್ಲರುಗಳ ಸ್ಫೋಟ ಸಂಭವಿಸಿರುವುದಿಲ್ಲ. ಆದರೆ ನೋಂದವಣೆಯಾಗದೆ ಇರುವ ಕೆಳಕಂಡ ಬಾಯ್ಲರುಗಳು ಸ್ಫೋಟಗೊಂಡಿರುವುದು ವರದಿಯಾಗಿರುತ್ತದೆ. 1. ದಿನಾಂಕ: 15-11-2019 ರಂದು ಮೆ. ಡೆನಿಮ್ಯಾಕ್ಸ್ ಜೀನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆಯಲ್ಲಿ ಅನಧಿಕೃತವಾಗಿ ಸ್ಥಾಪಿಸಲಾದ ಬಾಯ್ಲರ್ ಸ್ಫೋಟಗೊಂಡು ಇಬ್ಬರು ಕಾರ್ಮಿಕರು ಮೃತಪಟ್ಟಿರುತ್ತಾರೆ. 2. ದಿನಾಂಕ: 11-12-2019 ರಂದು ಹೋಟೆಲ್ ಶುಭಂ, ಶಿವಮೊಗ್ಗ, ಇಲ್ಲಿ ಬಾಯ್ಲರುಗಳ ಕಾಯ್ದೆ 1923 ರ ವ್ಯಾಪ್ತಿಗೆ ಒಳಪಡದ ಬಾಯ್ಲರ್ ಸ್ಫೋಟಗೊಂಡು ಮೂವರು ಕಾರ್ಮಿಕರು ಗಾಯಗೊಂಡಿರುತ್ತಾರೆ. 3. ದಿನಾಂಕ: 29-10-2020 ರಂದು ಬೆಂಗಳೂರಿನ ನ್ಯೂ ಉಡುಪಿ ಉಪಾಹಾರ ಹೊಟೇಲ್‌ನಲ್ಲಿ ಬಾಯ್ಲರುಗಳ ಕಾಯ್ದೆ 1923 ರ ವ್ಯಾಪ್ತಿಗೆ ಒಳಪಡದ ಬಾಯ್ಲರ್ ಸ್ಫೋಟಗೊಂಡು ಒಬ್ಬ ಕಾರ್ಮಿಕ ಮೃತಪಟ್ಟಿರುತ್ತಾರೆ.
2	ಕೈಗಾರಿಕಾ ಇಲಾಖೆಯಲ್ಲಿ ಮಂಜೂರಾದ ಬಾಯ್ಲರ್ ಇನ್ಸ್‌ಪೆಕ್ಟರ್ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಬಾಯ್ಲರ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಗೆ ಮಂಜೂರಾದ ಬಾಯ್ಲರ್ ಇನ್ಸ್‌ಪೆಕ್ಟರ್ ಹುದ್ದೆಗಳ ವಿವರ ಈ ಕೆಳಗಿನಂತಿದೆ. (see table below) ಇಲಾಖೆಯಲ್ಲಿ ಬಾಯ್ಲರ್ ವಿಭಾಗಕ್ಕೆ ಮಂಜೂರಾದ ಒಟ್ಟು 12 ಹುದ್ದೆಗಳಲ್ಲಿ 06 ಹುದ್ದೆಗಳು ಭರ್ತಿಯಾಗಿದ್ದು 06 ಹುದ್ದೆಗಳು ಖಾಲಿ ಇರುತ್ತದೆ.
3	ಕಳೆದ ಮೂರು ವರ್ಷಗಳಲ್ಲಿ ಬಾಯ್ಲರುಗಳನ್ನು ಸುಸ್ಥಿತಿಯಲ್ಲಿ	ಇಲಾಖೆಯ ವ್ಯಾಪ್ತಿಗೆ ಒಳಪಡುವ ಹಾಗೂ ಬಾಯ್ಲರುಗಳ ಕಾಯ್ದೆ ಅಡಿ ನೋಂದಣಿಯಾಗಿರುವ ಬಾಯ್ಲರುಗಳನ್ನು ಹೊಂದಿರುವ

ಕ್ರ ಸಂ	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಬಾಯ್ಲರುಗಳ ಜಂಟಿ ನಿರ್ದೇಶಕರು	01	01	-
2	ಬಾಯ್ಲರುಗಳ ಉಪ ನಿರ್ದೇಶಕರು	03	03	-
3	ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು	04	02	02
4	ಬಾಯ್ಲರುಗಳ ಸಹಾಯಕ ನಿರ್ದೇಶಕರು	04	-	04
	ಒಟ್ಟು	**12**	**06**	**06**